# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-4414/2015/ಡಿಆರ್ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 3/9/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಹೆಚ್.ಎನ್.ಚಂದ್ರು ಬಿನ್ ಲೇಟ್ ನಾಗಪ್ಪಗೌಡ, ಮಾಲಹಳ್ಳಿ ಗ್ರಾಮ, ಅರೆಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ, ಇವರು ಸಲ್ಲಿಸಿರುವ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ವರದಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

******

1. ಶ್ರೀ.ಹೆಚ್.ಎನ್.ಚಂದ್ರು ಬಿನ್ ಲೇಟ್ ನಾಗಪ್ಪಗೌಡ, ಮಾಲಹಳ್ಳಿ ಗ್ರಾಮ, ಅರೆಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಡಾ:ಎಸ್.ಎಸ್.ಮಧುಕೇಶ್ವರ, ಉಪ ವಿಭಾಗಾಧಿಕಾರಿ, ಸಕಲೇಶಪುರ ಉಪ ವಿಭಾಗ, ಹಾಸನ ಜಿಲ್ಲೆ ಹಾಗೂ ಇತರ 10 ಅಧಿಕಾರಿಗಳು (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ದೂರುದಾರರು ತಮ್ಮ ದೂರಿನಲ್ಲಿ ಬೇಲೂರು ತಾಲ್ಲೂಕು ಅರೇಹಳ್ಳಿ ಗ್ರಾಮದ ಸ.ನಂ.50 ರಲ್ಲಿ 4 ಎಕರೆ ಜಮೀನನ್ನು ದೂರುದಾರರು ಅನಧಿಕೃತ ಸಾಗುವಳಿ ಮಾಡುತ್ತಿದ್ದು, ಸದರಿ ಸ್ವತ್ತನ್ನು ಮಂಜೂರು ಮಾಡುವಂತೆ ನಮೂನೆ 53 ರಲ್ಲಿ ಅರ್ಜಿಯನ್ನು 1999 ರಲ್ಲಿ ಸಲ್ಲಿಸಿರುತ್ತಾರೆ. ಆ ಬಗ್ಗೆ ತಹಶೀಲ್ದಾರ್‌ರವರು ಯಾವುದೇ ಕ್ರಮ ಕೈಗೊಳ್ಳದೆ ಇದ್ದು, ಆ ಕಾರಣಕ್ಕಾಗಿ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ರಿಟ್ ಪಿಟಿಷನ್ ನಂ.47212/14 ರಂತೆ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ದೂರುದಾರರು ಸಲ್ಲಿಸಿರುವ ಅರ್ಜಿಯನ್ನು ಇತ್ಯರ್ಥ ಪಡಿಸುವಂತೆ ನ್ಯಾಯಾಲಯವು ತಹಶೀಲ್ದಾರ್‌ರವರಿಗೆ ನಿರ್ದೇಶನಕ ನೀಡಿರುತ್ತದೆ. ತಹಶೀಲ್ದಾರ್‌ರವರು ನ್ಯಾಯಾಲಯದ ಆದೇಶವನ್ನು ಪಾಲಿಸಲು ವಿಫಲರಾಗಿರುತ್ತಾರೆ ಮತ್ತು ದೂರುದಾರರು ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಿರುತ್ತಾರೆ. ತಹಶೀಲ್ದಾರ್‌ರವರು ಕಾನೂನನ್ನು ಉಲ್ಲಂಘಿಸಿ 23 ಎಕರೆ 23 ಗುಂಟೆ ಜಮೀನನ್ನು 6 ಜನರಿಗೆ ಮಂಜೂರು ಮಾಡಿರುತ್ತಾರೆ. ಕಂದಾಯ

ಅಧಿಕಾರಿಗಳು ದೂರುದಾರರನ್ನು ಸ್ವತ್ತಿನಿಂದ ತೆರವುಗೊಳಿಸಲು ಪ್ರಯತ್ನಿಸಿದ್ದರಿಂದ, ದೂರುದಾರರು ಬೇಲೂರು ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ 306/2013 ರಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ಅರೇಹಳ್ಳಿ ಗ್ರಾಮದ ಸ.ನಂ.50 ರಲ್ಲಿ 4 ಎಕರೆ ಜಮೀನನ್ನು ಸ್ಮಶಾನಕ್ಕಾಗಿ ಮೀಸಲಿಡಲಾಗಿದ್ದು, ಸದರಿ ಸ್ವತ್ತನ್ನು ಕೆಲವರು ಒತ್ತುವರಿ ಮಾಡಿರುತ್ತಾರೆ. ಸ್ಮಶಾನದ ಸ್ವತನ್ನು ಸಂರಕ್ಷಿಸಲು ಎದುರುದಾರರು ವಿಫಲರಾಗಿರುತ್ತಾರೆ. ಯಗಚಿ ಜಲಾಶಯ ಯೋಜನೆಯ ಮುಳುಗಡೆ ಸಂತ್ರಸ್ಥರ ಪುನರ್ವಸತಿಗಾಗಿ ಕಾಯ್ದಿರಿಸಲಾದ ಜಮೀನನ್ನು ಕಂದಾಯ ಅಧಿಕಾರಿಗಳು ಮುಳುಗಡೆ ಸಂತ್ರಸ್ಥರನ್ನು ಹೊರತುಪಡಿಸಿ ಬೇರೆಯವರಿಗೆ ಮಂಜೂರು ಮಾಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆ ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1 ರಿಂದ 10ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, 11ನೇ ಎದುರುದಾರರಿಗೆ ನೋಟೀಸು ಜಾರಿಯಾದರೂ ಸಹ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. 1 ರಿಂದ 10ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿ, ಅರೇಹಳ್ಳಿ ಗ್ರಾಮದ ಸ.ನಂ.50 ರಲ್ಲಿ ಒಟ್ಟು ಆಕಾರ್‌ಬಂದ್‌ನಂತೆ 41.26 ಎಕರೆ ವಿಸ್ತೀರ್ಣವಿರುತ್ತದೆ. ಇದರ ಪೈಕಿ ಯಗಚಿ ಜಲಾಶಯ ಯೋಜನೆ ಮುಳುಗಡೆ ಸಂತ್ರಸ್ಥರ ಪುನರ್ವಸತಿಗಾಗಿ 30 ಎಕರೆಯನ್ನು ಕಾಯ್ದಿರಿಸಲಾಗಿದೆ. 30 ಎಕರೆ ಪೈಕಿ ಮುಳುಗಡೆ ಸಂತ್ರಸ್ಥರಿಗೆ ಒಟ್ಟು 20 ಎಕರೆ 35 ಗುಂಟೆ ಮಂಜೂರಾಗಿರುತ್ತದೆ. 4 ಎಕರೆ ಪದವಿ ಕಾಲೇಜು, 4 ಎಕರೆ ಸ್ಮಶಾನ ಹಾಗೂ 1 ಎಕರೆ 5 ಗುಂಟೆ ದಾರಿಗಾಗಿ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಯಗಚಿ ಜಲಾಶಯ ಯೋಜನೆ ಮುಳುಗಡೆ ಸಂತ್ರಸ್ಥರ ಪುನರ್ವಸತಿಗಾಗಿ ಕಾಯ್ದಿರಿಸಿದ 30 ಎಕರೆ ಹೊರತು ಪಡಿಸಿ ಉಳಿಕೆ ಜಮೀನಿನಲ್ಲಿ ಈ ಹಿಂದೆಯೇ 5 ಜನರಿಗೆ ಒಟ್ಟು 10 ಎಕರೆ 8 ಗುಂಟೆ ಜಮೀನು ಮಂಜೂರಾಗಿರುತ್ತದೆ.

4. ಇದೇ ಸರ್ವೆ ನಂಬರ್‌ನಲ್ಲಿ 30 ಎಕರೆ ಪ್ರದೇಶವನ್ನು ಯಗಚಿ ಜಲಾಶಯ ಯೋಜನೆಯ ಸಂತ್ರಸ್ಥರಿಗೆ ಪುನರ್ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿದ್ದು, ಈ ಕೆಳಕಂಡವರು ಜಮೀನು ಮಂಜೂರು ಮಾಡಿಕೊಡಲು ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ರಿಟ್ ಪಿಟಿಷನ್ ಸಂ.46860/12 ಮತ್ತು 48710-48712/2012 ಗಳಲ್ಲಿ ಅರ್ಜಿದಾರರಿಗೆ ಮೂರು ತಿಂಗಳ ಒಳಗಾಗಿ ಜಮೀನು ಮಂಜೂರು ಮಾಡಲು ಮತ್ತು ಸ್ವಾಧೀನ ಕೊಡಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳು ನ್ಯಾಯಾಲಯದ ಆದೇಶದಂತೆ ಮಂಜೂರಿದಾರರಿಗೆ ಸಾಗುವಳಿ ಚೀಟಿ ನೀಡಲು ನಿರ್ದೇಶನ

ನೀಡಿರುತ್ತಾರೆ. ನೀಡಿದ ನಿರ್ದೇಶನದ ಪ್ರಕಾರ ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ, ಹಾಸನ ಇವರು ಜಮೀನನ್ನು ಮಂಜೂರು ಮಾಡಿ ಅಧಿಕೃತ ಜ್ಞಾಪನ ಹೊರಡಿಸಿರುತ್ತಾರೆ.

5. ದೂರುದಾರರಾದ ಚಂದ್ರು ಹೆಚ್.ಎನ್. ಇವರು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಪಿಟಿಷನ್ ನಂ.47212/2014 ರಂತೆ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ನ್ಯಾಯಾಲಯವು ದೂರುದಾರರು ಸಲ್ಲಿಸಿರುವ ನಮೂನೆ 53 ನ್ನು ಭೂ ನ್ಯಾಯ ಮಂಡಳಿಯ ಮುಂದೆ ಮಂಡಿಸಲು ತಹಶೀಲ್ದಾರ್, ಬೇಲೂರು ತಾಲ್ಲೂಕು ಇವರಿಗೆ ನಿರ್ದೇಶನ ನೀಡಿರುವುದು ಕಂಡುಬರುತ್ತದೆ. ಅಲ್ಲದೆ ಸದರಿ ಅರ್ಜಿಯನ್ನು ಕಾನೂನಿನನ್ವಯ ಪರಿಶೀಲಿಸಿ ಆದೇಶ ಮಾಡುವಂತೆ ಭೂ ನ್ಯಾಯ ಮಂಡಳಿಗೆ ದಿ.26/2/15 ರ ಆದೇಶದಲ್ಲಿ ಆದೇಶಿಸಿರುವುದು ಕಂಡುಬರುತ್ತದೆ. ದಿ.14/7/15 ರಂದು ತಹಶೀಲ್ದಾರ್ ಮತ್ತು ಸದಸ್ಯ ಕಾರ್ಯದರ್ಶಿ ಅನಧಿಕೃತ ಸಾಗುವಳಿ ಸಕ್ರಮ ಸಮಿತಿ ಬೇಲೂರು ಇವರು ಆದೇಶವನ್ನು ಮಾಡಿದ್ದು, ಈ ಕೆಳಗಿನಂತೆ ಆದೇಶವನ್ನು ಮಾಡಿರುವುದು ಕಂಡುಬರುತ್ತದೆ.

> *"ಸರ್ಕಾರದ ಸುತ್ತೋಲೆ ಸಂ.ಆರ್.ಡಿ.168 ಎಲ್.ಜಿ.ಪಿ 2014 ದಿ.9/6/2014 ರ ಆದೇಶದಲ್ಲಿ ಬಗರ್ ಹುಕುಂ ಸಮಿತಿಯ ಸದಸ್ಯ ಕಾರ್ಯದರ್ಶಿಗೆ ಪ್ರತ್ಯಾಯೋಜನೆ ಮಾಡಿರುವ ಅಧಿಕಾರವನ್ನು ಬಳಸಿಕೊಂಡು ಬೇಲೂರು ತಾಲ್ಲೂಕು ತಹಶೀಲ್ದಾರ್ ಮತ್ತು ಬಗರ್ ಹುಕುಂ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಅರೇಹಳ್ಳಿ ಸ.ನಂ.50 ರಲ್ಲಿ ಬಾಕಿ ಇದ್ದ ನಮೂನೆ 50 ಮತ್ತುಯ 53 ರ ಅರ್ಜಿಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಪರಿಗಣಿಸಿ ಜಮೀನು ಮಂಜೂರು ಮಾಡಲು ಅವಕಾಶವಿಲ್ಲವೆಂದು ತೀರ್ಮಾನಿಸಿ, ಬಾಕಿ ಇದ್ದ 04 ಅರ್ಜಿಗಳನ್ನು ತಿರಸ್ಕರಿಸಿದೆ/ವಜಾ ಮಾಡಿದೆ."*

6. ಮೇಲಿನ ಅಂಶಗಳನ್ನು ಗಮನಿಸಿದಾಗ, ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ತಹಶೀಲ್ದಾರ್ ದೂರುದಾರರು ಮತ್ತು ಇತರರ ಅರ್ಜಿಯ ಮೇಲೆ ಆದೇಶವನ್ನು ಮಾಡಿದ್ದು, ಸದರಿ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ದೂರುದಾರರಿಗೆ ಅವಕಾಶವಿದೆ. ಆದ್ದರಿಂದ, ಸದರಿ ಅಂಶದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 8(1)(ಬಿ) ರನ್ವಯ ತನಿಖೆಯನ್ನು ನಡೆಸಲು ಅವಕಾಶವಿಲ್ಲವೆಂದು ಅಭಿಪ್ರಾಯ ಪಡಲಾಗಿದೆ.

7. ದೂರುದಾರರು ತಮ್ಮ ದೂರಿನಲ್ಲಿ ಸ್ಮಶಾನಕ್ಕೆ ಮೀಸಲಿಟ್ಟ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಮತ್ತು ಆ ಜಮೀನನ್ನು ರಕ್ಷಿಸಲು ಎದುರುದಾರರು ವಿಫಲರಾಗಿರುತ್ತಾರೆಂದು ಆಪಾದಿಸಿರುತ್ತಾರೆ. ವಿಶೇಷ ಭೂ ಸ್ವಾಧೀನಾಧಿಕಾರಿಯವರು ಸಲ್ಲಿಸಿರುವ ಪಹಣಿ ಪತ್ರಿಕೆಯ ಪ್ರತಿಯನ್ನು ಪರಿಶೀಲಿಸಿದಾಗ, ಅರೆಹಳ್ಳಿ ಗ್ರಾಮದ ಸ.ನಂ.50/ಪಿ3 ಯಲ್ಲಿ 4 ಎಕರೆ ಜಮೀನು

ಹಿಂದುಗಳಿಗೆ ಸ್ಮಶಾನ ಎಂದು ದಾಖಲಾಗಿರುವುದು ಕಂಡುಬರುತ್ತದೆ. ಎಂ.ಆರ್.14/1992-93 ರಂತೆ 4 ಎಕರೆ ಜಮೀನು ಸ್ಮಶಾನಕ್ಕೆ ಮೀಸಲಿಟ್ಟಿರುವುದು ಹಾಗೂ ಪಹಣಿ ಪತ್ರಿಕೆಯ ಕಾಲಂ ನಂ.9 ಮತ್ತು 12 ರಲ್ಲಿ ಹಿಂದೂಗಳಿಗೆ ಸ್ಮಶಾನ ಎಂದು ನಮೂದಾಗಿರುವುದು ಕಂಡುಬರುತ್ತದೆ. ಆದ್ದರಿಂದ, ಸ್ಮಶಾನದ ಜಮೀನು ಒತ್ತುವರಿಯಾಗಿದೆ ಹಾಗೂ ಅದನ್ನು ಬೇರೆಯವರಿಗೆ ಮಂಜೂರು ಮಾಡಲಾಗಿದೆಯೆಂದು ದೂರುದಾರರು ಮಾಡಿರುವ ಆಪಾದನೆಯನ್ನು ಪುಷ್ಟೀಕರಿಸಲು ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ.

8. ಯಗಚಿ ಜಲಾಶಯ ಯೋಜನೆಯಲ್ಲಿ ಮುಳುಗಡೆ ಸಂತ್ರಸ್ಥರ ಪುನರ್ವಸತಿಗಾಗಿ ಕಾಯ್ದಿರಿಸಿದ ಜಮೀನನ್ನು ಬೇರೆಯವರಿಗೆ ಮಂಜೂರು ಮಾಡಿರುತ್ತಾರೆಂದು ಆಪಾದಿಸಿದ್ದು, ಸದರಿ ಅಂಶಗಳ ಬಗ್ಗೆ ವಿಚಾರಣೆ ನಡೆಸುವುದು ಸೂಕ್ತವೆಂದು ಕಂಡುಬಂದ ಕಾರಣ,

   i. ಸ್ಮಶಾನಕ್ಕೆ ಮೀಸಲಿಟ್ಟಿರುವ 4 ಎಕರೆ ಜಮೀನಿನಲ್ಲಿ ಒತ್ತುವರಿಯಿದೆಯೇ?
   ii. ಯಗಚಿ ಜಲಾಶಯ ಯೋಜನೆಯಲ್ಲಿ ಎಷ್ಟು ಜನರು ಜಮೀನನ್ನು ಕಳೆದುಕೊಂಡಿರುತ್ತಾರೆ./
   iii. ಯಗಚಿ ಜಲಾಶಯ ಯೋಜನೆಯಲ್ಲಿ ಜಮೀನನ್ನು ಕಳೆದುಕೊಂಡ ಎಷ್ಟು ಜನರಿಗೆ ಬದಲಿ ಜಮೀನು ಮತ್ತು ಪರಿಹಾರವನ್ನು ನೀಡಲಾಗಿದೆ?
   iv. ಯಗಚಿ ಜಲಾಶಯ ಯೋಜನೆ ಮುಳುಗಡೆ ಸಂತ್ರಸ್ಥರ ಪುನರ್ವಸತಿಗಾಗಿ ಕಾಯ್ದಿರಿಸಿದ 30 ಎಕರೆ ಜಮೀನಿನಲ್ಲಿ ಎಷ್ಟು ಎಕರೆ ಜಮೀನನ್ನು ಯಾರ್‍ಯಾರಿಗೆ ಮಂಜೂರು ಮಾಡಲಾಗಿದೆ ಎನ್ನುವ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ದಾಖಲಾತಿಗಳ ಸಮೇತ ವರದಿ ಸಲ್ಲಿಸುವಂತೆ ವಿಶೇಷ ಭೂಸ್ವಾಧೀನಾಧಿಕಾರಿ, ಹೇಮಾವತಿ ಜಲಾಶಯ ಯೋಜನೆ, ಹಾಸನ ಇವರಿಗೆ ಆದೇಶಿಸಲಾಗಿತ್ತು.

9. ವಿಶೇಷ ಭೂ ಸ್ವಾಧೀನಾಧಿಕಾರಿ, ಹಾಸನ ಇವರು ವರದಿಯನ್ನು ಸಲ್ಲಿಸಿದ್ದು, ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

   i. ಸ.ನಂ.50 ರಲ್ಲಿ ಸ್ಮಶಾನಕ್ಕೆ 4 ಎಕರೆ ಮೀಸಲಿರಿಸಿರುವ ಜಮೀನು ಒತ್ತುವರಿಯಾಗಿದ್ದು, ಅದನ್ನು ಖುಲ್ಲಾಪಡಿಸಲಾಗಿರುತ್ತದೆ.
   ii. ಯಗಚಿ ಜಲಾಶಯ ಯೋಜನೆಯಡಿಯಲ್ಲಿ 40 ಗ್ರಾಮಗಳಲ್ಲಿ 3939 ಜನರು ಜಮೀನನ್ನು ಕಳೆದುಕೊಂಡಿರುತ್ತಾರೆ.
   iii. ಯಗಚಿ ಜಲಾಶಯ ಯೋಜನೆಯಲ್ಲಿ ಜಮೀನನ್ನು ಕಳೆದುಕೊಂಡ 1775 ಜನರಿಗೆ 7100-00 ಎಕರೆ ಬದಲಿ ಜಮೀನನ್ನು ನೀಡಲಾಗಿದೆ.

iv. ಯಗಚಿ ಜಲಾಶಯ ಯೋಜನೆ ಮುಳುಗಡೆ ಸಂತ್ರಸ್ತರ ಪುನರ್ವಸತಿಗಾಗಿ ಕಾಯ್ದಿರಿಸಿದ 30 ಎಕರೆ ಜಮೀನಿನಲ್ಲಿ ತಲಾ 4 ಎಕರೆ ಜಮೀನನ್ನು ಮೊಹಮ್ಮದ್ ಜಾಫರ್, ಬುಡೇನ್‌ಸಾಬ್, ಮುನಾವರ್ ಪಾಷಾ, ಹೆಚ್.ಎನ್.ಭದ್ರೇಗೌಡ, ಮತ್ತು ಜಮಾಲ್ ಎನ್ನುವವರಿಗೆ ಮಂಜೂರು ಮಾಡಿದ್ದು, ಸದರಿ ಮಂಜೂರುದಾರರು ಜಮೀನಿನ ಅಳತೆ ಕಾರ್ಯ ನಡೆಸಿ ಲಭ್ಯವಿರುವ ಜಮೀನನ್ನು ಬಿಡಿಸಿಕೊಡುವಂತೆ ಹೇಳಿಕೆ ನೀಡಿದ್ದರ ಮೇರೆಗೆ ತಹಶೀಲ್ದಾರ್, ಬೇಲೂರು ಇವರು ಅಳತೆ ಸಮಯದಲ್ಲಿ ಇದ್ದಂತಹ ವಿಸ್ತೀರ್ಣವನ್ನು ಮಂಜೂರಿದಾರರಿಗೆ ಹಸ್ತಾಂತರಿಸುವ ಕುರಿತು ಪರಿಷ್ಕರಿಸಿ ಆದೇಶ ಹೊರಡಿಸಬೇಕಾಗಿರುತ್ತದೆಯೆಂದು ಮೋಜಣಿದಾರರು ತಯಾರಿಸಿರುವ ನಕ್ಷೆ ಮತ್ತು ಮಂಜೂರಿದಾರರು ನೀಡಿರುವ ಹೇಳಿಕೆ ಪ್ರತಿಯನ್ನು ಸಲ್ಲಿಸಿದ್ದು, ಪುನಃ ಪರಿಷ್ಕೃತ ತಿದ್ದುಪಡಿ ಆದೇಶವನ್ನು ಮಾಡಿದ್ದು, ಆ ಪ್ರಕಾರ ಮುಜೀಬ್ ಎಂಬುವರಿಗೆ ಸ.ನಂ.50/1 ರಲ್ಲಿ 03.20 ಎಕರೆ, ಬುಡೇನ್‌ಸಾಬ್‌ರವರಿಗೆ ಸ.ನಂ.50/2 ರಲ್ಲಿ 03.25 ಎಕರೆ, ಮುನಾವರ್ ಪಾಷಾ ಎನ್ನುವರಿಗೆ ಸ.ನಂ.50/3 ರಲ್ಲಿ 03.20 ಎಕರೆ, ಹೆಚ್.ಎನ್.ಭದ್ರೇಗೌಡ ಎನ್ನುವರಿಗೆ ಸ.ನಂ.50/4 ರಲ್ಲಿ 2.30 ಮತ್ತು 50/6 ರಲ್ಲಿ 0.25 ಗುಂಟೆ ಹಾಗೂ ಜಮಾಲ್ ಎನ್ನುವರಿಗೆ ಸ.ನಂ.50/5 ರಲ್ಲಿ 03.25 ವಿಸ್ತೀರ್ಣದ ಬಗ್ಗೆ ತಿದ್ದುಪಡಿ ಆದೇಶವನ್ನು ಮಾಡಲಾಗಿರುತ್ತದೆಯೆಂದು ಹೇಳಿರುತ್ತಾರೆ.

10. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮುಳುಗಡೆ ಸಂತ್ರಸ್ಥರಿಗೆ ಕಾಯ್ದಿರಿಸಿದ ಜಮೀನನ್ನು ಅರ್ಹ ಮುಳುಗಡೆ ಸಂತ್ರಸ್ಥರಿಗೆ ಮಂಜೂರು ಮಾಡಿ ಅವರಿಗೆ ನಿಯಮಾವಳಿಗಳನ್ವಯ ಹಕ್ಕುಪತ್ರಗಳನ್ನು ವಿತರಿಸುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್.ಆನಂದ್)
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**